**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕ: 07.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ವಾದಿಗಳ ಪರ ಶ್ರೀ .ಸಿ.ಆರ್.ಬಿ.ವಕೀಲರಿಂದ:**

ನನ್ನ ತಂದೆಯ ಹೆಸರು ದಾಸೇಗೌಡ ಮತ್ತು ತಾತನ ಹೆಸರು ಹನುಮಂತೇಗೌಡ . ನನ್ನ ತಂದೆಗೆ ಇಬ್ಬರು ಹೆಂಡತಿಯರು , ಗಂಗಮ್ಮ ಮತ್ತು ಗೌರಮ್ಮ ಎಂದರೆ ಸರಿ . 1 ನೇ ವಾದಿ ದಾಸೇಗೌಡ ಮತ್ತು ಗಂಗಮ್ಮರವರ ಮಗ ಎಂದರೆ ಸರಿ . ನಾನು ಮತ್ತು 2 ನೇ ಪ್ರತಿವಾದಿ ಗೌರಮ್ಮರವರ ಮಕ್ಕಳು ಎಂದರೆ ಸರಿ . ನನ್ನ ತಂದೆ 1999 ರಲ್ಲಿ ಮರಣಹೊಂದಿರುತ್ತಾರೆ. 1 ನೇ ವಾದಿ 3 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. 2 ನೇ ವಾದಿ 1 ನೇ ವಾದಿಯ ಮಗ ಎಂದರೆ ಸರಿ . ನನ್ನ ತಮ್ಮ 2 ನೇ ಪ್ರತಿವಾದಿ ಈಗ ಮರಣಹೊಂದಿರುತ್ತಾನೆ, ಅವರ ಹೆಂಡತಿಯ ಹೆಸರು ವಿಶಾಲಮ್ಮ . ಅವರಿಬ್ಬರ ಮಗ ಸಹ ಮರಣಹೊಂದಿರುತ್ತಾನೆ ಎಂದರೆ ಸರಿ . ದಾವಾಸ್ವತ್ತು ಮತ್ತು ಇತರೆ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ . ದಾವಾಸ್ವತ್ತು ಮತ್ತು ಇತರೆ ಆಸ್ತಿಗಳು ನನ್ನ ತಂದೆಗೆ ಮತ್ತು ಅವರ ಅಣ್ಣ ತಮ್ಮಂದಿರಿಗೆ ಆಗ ವಿಭಾಗದ ಮೂಲಕ ಬಂದಿರುತ್ತದೆ ಎಂದರೆ ಸರಿ . ನನ್ನ ತಂದೆ , ನನ್ನ ಅಣ್ಣ ತಮ್ಮಂದಿರು ಮತ್ತು ನಾನು ಈ ದಾವಾಸ್ವತ್ತನ್ನು ಮತ್ತು ಇತರೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ . ಅದರಂತೆ ದಾವಾಸ್ವತ್ತು ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ . ನನ್ನ ತಂದೆ ದಾವಾಸ್ವತ್ತಿನ ಸ್ವಾಧೀನದಲ್ಲಿದ್ದರು ಎಂದರೆ ಸರಿ . ನನ್ನ ತಂದೆಯ ಮರಣಾನಂತರ 1 ನೇ ವಾದಿ ನಾನು ಮತ್ತು 2 ನೇ ಪ್ರತಿವಾದಿ ದಾವಾಸ್ವತ್ತಿನ ಜಂಟೀ ಮಾಲೀಕರಾಗಿರುತ್ತೇವೆ ಎಂದರೆ ಸಾಕ್ಷಿ ನಾನು ಮತ್ತು 2 ನೇ ಪ್ರತಿವಾದಿ ಮಾತ್ರ ದಾವಾಸ್ವತ್ತಿನ ಜಂಟೀ ಮಾಲೀಕರಾಗಿರುತ್ತೇವೆ ಎನ್ನುತ್ತಾರೆ.

2. 1 ನೇ ವಾದಿ ನಾನು ಮತ್ತು 2 ನೇ ಪ್ರತಿವಾದಿ ದಾವಾಸ್ವತ್ತಿನ ಸ್ವಾಧೀನದಲ್ಲಿದ್ದೆವು ಎಂದರೆ ಸಾಕ್ಷಿ ನಾನು 2 ನೇ ಪ್ರತಿವಾದಿ ಮಾತ್ರ ಅದರ ಸ್ವಾಧೀನದಲ್ಲಿದ್ದೆವು ಎನ್ನುತ್ತಾರೆ. 1 ನೇ ವಾದಿ ಮತ್ತು 2 ನೇ ಪ್ರತಿವಾದಿಯ ಮರಣದ ನಂತರ 2 ನೇ ವಾದಿ , ನಾನು ಮತ್ತು ಪ್ರತಿವಾದಿ 2(ಎ) ದಾವಾಸ್ವತ್ತಿನ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿಯಲ್ಲ.

3. ನನ್ನ ತಂದೆಯ ಮರಣಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆ ಮೃತಪಟ್ಟಾಗ ಅವರಿಗೆ ಸುಮಾರು 85 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ನನ್ನ ತಂದೆಯ ಮರಣದ 5 ವರ್ಷಗಳ ಹಿಂದಿನಿಂದ ಅವರಿಗೆ ಅನೇಕ ಖಾಯಿಲೆಗಳಿದ್ದವು ಮತ್ತು ಅವರು ತಮ್ಮ ಜ್ಞಾಪಕ ಶಕ್ತಿಯನ್ನು ಕಳೆದುಕೊಂಡಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಾನು ಮತ್ತು ವಾದಿಗಳು ಎಲ್ಲರೂ ದಾವಾಸ್ವತ್ತನ್ನು ಒಟ್ಟಾಗಿ ಅನುಭವಿಸಿಕೊಂಡು ಹೋಗಬೇಕು ಎಂದು ಆಶಯವಿತ್ತು ಎಂದರೆ ಸಾಕ್ಷಿ ನನ್ನ ತಂದೆ ವಿಲ್ ಬರೆದುಹೋಗಿದ್ದು ಅವರ ಮರಣದ ನಂತರ ಅವರ ಪೆಟ್ಟಿಗೆಯಲ್ಲಿ ನನಗೆ ಸಿಕ್ಕಿರುತ್ತದೆ ಎನ್ನುತ್ತಾರೆ. ನನ್ನ ತಂದೆ ದಿಃ 02-07-1998 ರಂದು ವಿಲ್ ಅನ್ನು ಬರೆದಿರುತ್ತಾರೆ. ಮರಣದ ಮುನ್ನ ನನ್ನ ತಂದೆ ಪ್ರತ್ಯೇಕವಾಸವಿದ್ದರು. ನನ್ನ ತಾಯಿ 2010 ರಲ್ಲಿ ಮರಣಹೊಂದಿರುತ್ತಾರೆ. ಮರಣದ ಮುನ್ನ ನನ್ನ ತಂದೆ ಮತ್ತು ತಾಯಿ ಪ್ರತ್ಯೇಕವಾಸವಿದ್ದು ಅವರನ್ನು ನಾನೇ ನೋಡಿಕೊಂಡಿರುತ್ತೇನೆ. ನನ್ನ ತಂದೆ ಯಾವುದೇ ವಿಲ್ ಅನ್ನುಬರೆದಿರುವುದಿಲ್ಲ , ಅದ ನ್ನು ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಪೆಟ್ಟಿಗೆಯಲ್ಲಿ ಸದರಿ ವಿಲ್ ಸಿಕ್ಕಿರುವುದಿಲ್ಲ ಅದನ್ನು ನಾನೇ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

4. ದಿಃ02-07-1998 ರಂದು ನನ್ನ ತಂದೆಯನ್ನು ಗುಬ್ಬಿಗೆ ನಿ.ಡಿ.1 ವಿಲ್ ಅನ್ನು ಬರೆಸಲು ನಾನೇ ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಯಾರ ಜೊತೆ ಬಂದ್ದಿರೋ ನನಗೆ ಗೊತ್ತಿಲ್ಲ. ನಿ.ಡಿ.1 ಅನ್ನು ಬರೆಸಲು ನನ್ನ ತಂದೆಯನ್ನು ಪತ್ರಬರಹಗಾರರಾದ ರಾಜಪ್ಪರವರ ಹತ್ತಿರ ನಾನೇ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಆ ಕಾಲಕ್ಕೆ ಜ್ಞಾಪಕ ಶಕ್ತಿ ಸರಿಯಾಗಿ ಇಲ್ಲದೇ ಇರುವುದರಿಂದ ಸದರಿ ವಿಲ್ ನಲ್ಲಿರುವ ವಿಚಾರಗಳನ್ನುನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ಮತ್ತು 1 ನೇ ವಾದಿ ಬೇರೆ ತಾಯಿಯರ ಮಕ್ಕಳಾದ್ದರಿಂದ ನಮ್ಮ ನಡುವೆ ವಿಶ್ವಾಸ ಇರಲಿಲ್ಲ ಎಂದರೆ ಸರಿಯಲ್ಲ. 1ನೇ ವಾದಿಗೆ ದಾವಾಸ್ವತ್ತಿನಲ್ಲಿ ಭಾಗಾಂಶ ಕೊಡಬಾರದು ಎಂದು ಉದ್ದೇಶದಿಂದ ನಿ.ಡಿ.1 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.1 ಬರೆದಿರುವ ಛಾಪಾಕಾಗದವನ್ನು ಯಾರು ತಂದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಛಾಪಾ ಕಾಗದವನ್ನುನಾನೇ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ಎಷ್ಟು ಕಾಗದಗಳಿಂದ ನಿ.ಡಿ.1 ಅನ್ನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿ.ಡಿ.1 ರಲ್ಲಿ ನನ್ನ ತಾಯಿಯ ಹಿಸ್ಸೆಯ ಬಗ್ಗೆ ಏನೂ ನಮೂದಾಗಿರುವುದಿಲ್ಲ.

6. ದಾಸೇಗೌಡರವರ ಮೊದಲನೇ ಹೆಂಡತಿ ಗಂಗಮ್ಮ ಮೃತಪಟ್ಟು ಬಹಳಷ್ಟು ವರ್ಷಗಳ ಕಳೆದಿರುತ್ತವೆ. ನನ್ನ ತಂದೆ ಜೀವಂತವಿದ್ದಾಗ ಗಂಗಮ್ಮರವರು ಸಹ ಜೀವಂತ ಇದ್ದರು ಎಂದರೆ ಸರಿಯಲ್ಲ. ಗಂಗಮ್ಮರವರು ಬದುಕಿದ್ದಂತೆ ನನ್ನ ತಂದೆ ನನ್ನತಾಯಿಯನ್ನು ವಿವಾಹವಾಗಿರುತ್ತಾರೆ ಎಂದರೆ ಸರಿಯಲ್ಲ.

7. ನಿ.ಡಿ.1 ಅನ್ನು ನನ್ನ ತಂದೆ ಯಾವ ಸಮಯಕ್ಕೆ ನೊಂದಣಿ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಡಿ.1 ರ ಮೇಲಿರುವುದು ನಿಮ್ಮ ತಂದೆಯ ಸಹಿ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆಯ ಮರಣದ ಮುಂಚೆ ಅವರಿಗೆ ಕಣ್ಣು ಕಾಣುತ್ತಿರಲಿಲ್ಲ ಮತ್ತು ಅವರಿಗೆ ನಡೆಯಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿ,ಡಿ.1 ಕ್ಕೆ ಗೌರೀಪುರದ ಬಸವರಾಜು ಮತ್ತು ಗುಡ್ಡದಹಳ್ಳಿಯ ಚಿಕ್ಕೇಗೌಡರವರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ಸದರಿ ಬಸವರಾಜುರವರು ಈಗ ಮೃತಪಟ್ಟಿರುತ್ತಾರೆ.

8. ನಿ.ಡಿ.1 ಕ್ಕೆ ಗುಡ್ಡದಹಳ್ಳಿಯ ಚಿಕ್ಕೇಗೌಡರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಸವರಾಜುರವರಿಗೂ ಮತ್ತು ನನಗೂ ಒಳ್ಳೆಯ ವಿಶ್ವಾಸ ಇತ್ತು ಎಂದರೆ ಸರಿಯಲ್ಲ. ಅವರು ನನಗೆ ಸಂಬಂದಿಕರು ಎಂದರೆ ಸರಿ . ಸದರಿ ಬಸವರಾಜುರವರು ನಮ್ಮ ಊರಿನವರಾದ್ದರಿಂದ ಅವರೊಡನೆ ನಿ.ಡಿ.1 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**